ಜರ್ಮನಿಯಿಂದ ಬಂದಿರುವ ಅತ್ಯಾಧುನಿಕ 3 ಡಿ ತಂತ್ರಜ್ಞಾನ ಈ ಎಲ್ಲ ಯಾತನೆಗಳಿಗೆ ತೆರೆ ಎಳೆದಿದ್ದು, ರೋಗಿ ಕನಿಷ್ಠ ನೋವು ಮಾತ್ರ ಅನುಭವಿಸಿ ಎರಡೇ ದಿನಗಳಲ್ಲಿ ಮನೆಗೆ ಮರಳಲು ಸಾಧ್ಯ.

ಬೆನ್ನುಮೂಳೆ ಮತ್ತು ಮೆದುಳು ಎರಡೂ ಬಹಳ ಸೂಕ್ಷ್ಮ ಅಂಗಗಳು. ಇವೆರಡಕ್ಕೂ ನೇರಾನೇರ ಸಂಬಂಧವಿದ್ದು, ಮೆದುಳನ್ನು ಸಂಪರ್ಕಿಸುವ ಬೆನ್ನುಮೂಳೆಗೆ ಏನೇ ತೊಂದರೆಯಾದರೂ ಆತಂಕ, ಆಘಾತ ಪಡುವ ಪರಿಸ್ಥಿತಿ ರೋಗಿಯದ್ದು.

## ವಯಸ್ಸಿನ ನಿರ್ಬಂಧವಿಲ್ಲ

ಬೆನ್ನು ನೋವು ಬರಲು ಇಂಥದ್ದೇ ಕಾರಣ ಬೇಕಿಲ್ಲ, ಜೊತೆಗೆ ವಯಸ್ಸಿನ ನಿರ್ಬಂಧವೂ ಇಲ್ಲ. ಚಿಕ್ಕ ವಯಸ್ಸಿನಿಂದ ಹಿಡಿದು ಮುದುಕರವರೆಗೆ ಯಾವಾಗ ಬೇಕಾದರೂ ಬರಬಹುದು. ಆದರೆ ಮಧ್ಯವಯಸ್ಸಿನವರಲ್ಲಿ ಬೆನ್ನುನೋವಿನ ಸಮಸ್ಯೆ ಹೆಚ್ಚು. ಕುಳಿತೇ ಕೆಲಸ ಮಾಡುವವರಲ್ಲಿ, ಕ್ರೀಡಾಪಟುಗಳಲ್ಲಿ, ಆನುವಂಶಿಕವಾಗಿಯೂ ಬೆನ್ನುಮೂಳೆ ಸಮಸ್ಯೆ ಹೆಚ್ಚು. ಧೂಮಪಾನ ಮಾಡುವವರಿಗೆ ಬೆನ್ನುಮೂಳೆ ಸಮಸ್ಯೆ ಕಟ್ಟಿಟ್ಟ ಬುತ್ತಿ. ಬೆನ್ನುಮೂಳೆಯ ಮಧ್ಯೆ ಗಡ್ಡೆ ಬೆಳೆದಾಗ, ಅಪಘಾತಗಳಿಂದ ಬೆನ್ನಿಗೆ ಏಟು ಆದವರಿಗೂ ಈ ಸಮಸ್ಯೆ ಬಾಧಿಸುತ್ತದೆ. ಪ್ರಯಾಣಿಸುವಾಗ ಸೀಟ್‌ಬೆಲ್ಟ್ ಹಾಕದೇ ಇರುವುದು. ಬಹುತೇಕ ಎಲ್ಲ ಪ್ರಕರಣಗಳಿಗೂ ಬೆನ್ನುಮೂಳೆ ಶಸ್ತ್ರಚಿಕಿತ್ಸೆಯೇ ಸೂಕ್ತವಾದ ಪರಿಹಾರ ಒದಗಿಸಬಹುದು.

'ಬೆನ್ನಿನ ಕೆಳಭಾಗದಲ್ಲಿ ನೋವು ಬರಲು ಪ್ರಮುಖ ಕಾರಣಗಳೆಂದರೆ ಡಿಸ್ಕ್, ಲಿಗಮೆಂಟ್, ಜಾಯಿಂಟ್, ಮೂಳೆ ಹಾಗೂ ನರಗಳಲ್ಲಿ ತೊಂದರೆ ಅಲ್ಲದೆ ಬೆನ್ನುಮೂಳೆಯ ಸಂಧಿಯಲ್ಲಿ ಗಡ್ಡೆಗಳಿರುವುದು. ಬೆನ್ನುಮೂಳೆಗೆ ಸೋಂಕು ತಗುಲಿದರೂ ತೊಂದರೆ ಆಗುತ್ತದೆ. ಮೂಳೆಯ ಸಂಧಿಗಳಲ್ಲಿ ಹೆಚ್ಚುವರಿ ದುರ್ಮಾಂಸ ಬೆಳೆದರೂ ಅದು ತೀವ್ರತರವಾದ ಬೆನ್ನುನೋವಿಗೆ ಆಸ್ಪದ ಮಾಡಿಕೊಡುತ್ತದೆ' ಎಂದು ಹೇಳುತ್ತಾರೆ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿರುವ ಎಸ್‌ಎಸ್‌ಎನ್‌ಎಂಸಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬೆನ್ನುಹುರಿ ಸರ್ಜನ್ ಆಗಿರುವ ಡಾ. ವೆಂಕಟರಮಣ ಎನ್.ಕೆ.

ಭಾರತದಲ್ಲಿ ಸುಮಾರು ಶೇ. 60–80ರಷ್ಟು ಜನರು ಬೆನ್ನುನೋವಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎನ್ನುತ್ತದೆ ಇತ್ತೀಚಿನ ಸಮೀಕ್ಷೆ ನೀಡಿದ ಅಂಕಿ ಅಂಶ. ಹಿಂದೆಲ್ಲ ನಡೆಸುತ್ತಿದ್ದ ಸಾಂಪ್ರದಾಯಿಕ ಬೆನ್ನುಮೂಳೆ ಶಸ್ತ್ರಕ್ರಿಯೆಯಲ್ಲಿ ಸ್ಕ್ರೂ, ಮತ್ತಿತರ ಸಾಧನಗಳನ್ನು ಸೂಕ್ತ ಜಾಗಕ್ಕೆ ಅಳವಡಿಸಬೇಕಾಗಿತ್ತು. ಇದು ತಜ್ಞವೈದ್ಯರಿಗೂ ಸವಾಲಾಗುತ್ತಿತ್ತು. ಆದರೆ ಈ ಹೊಸ ತಂತ್ರಜ್ಞಾನ ಶಸ್ತ್ರಕ್ರಿಯೆ ಸಂಬಂಧಿತ ಸಮಸ್ಯೆಗಳನ್ನು ನಿವಾರಿಸುತ್ತದೆ, ಇದೊಂದು ಸುರಕ್ಷಿತ ವಿಧಾನ.

## ಪತ್ತೆ ಹೇಗೆ?

ಬೆನ್ನುಮೂಳೆಯಲ್ಲಿ ಏನೇ ಸಮಸ್ಯೆ ಬಂದರೂ ಎಕ್ಸರೇ, ಸಿಟಿ ಸ್ಕ್ಯಾನ್ ಮತ್ತು ಎಂಆರ್‌ಐ ಸ್ಕ್ಯಾನ್ ಮೂಲಕ ಪತ್ತೆ ಹಚ್ಚಬಹುದು. ಮೈಕ್ರೊ ಸರ್ಜರಿ, ಕೃತಕ ಡಿಸ್ಕ್ ಅಳವಡಿಸುವ ಸರ್ಜರಿ ಸ್ವಲ್ಪಮಟ್ಟಿಗೆ ಪರಿಹಾರ ಒದಗಿಸಬಹುದು. ಇದೀಗ ಜರ್ಮನಿಯಿಂದ ಬಂದ 3ಡಿ ತಂತ್ರಜ್ಞಾನ ಬೆನ್ನುನೋವಿನ ಎಲ್ಲ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸುತ್ತಿದೆ. ಬೆನ್ನುಮೂಳೆಯಲ್ಲಿ ತೊಂದರೆ ಇರುವ ಜಾಗವನ್ನು ಈ ಮೆಷಿನ್ ಕೇವಲ ಒಂದು ನಿಮಿಷದಲ್ಲಿ ಪತ್ತೆ ಹಚ್ಚುತ್ತದೆ. ಇದರ ಮೂಲಕ ಸರ್ಜರಿಯನ್ನು ಅತ್ಯಂತ ಸುಲಭವಾಗಿ ಮಾಡಬಹುದು.

'ಸಣ್ಣ ರಂಧ್ರದ ಮೂಲಕ ವೈದ್ಯಕೀಯ ಉಪಕರಣವನ್ನು ತೂರಿಸಿ ಮಾಡುವ ಈ ಸರ್ಜರಿ ರೋಗಿಯನ್ನು ಅತ್ಯಂತ ವೇಗವಾಗಿ ಸಹಜ ಸ್ಥಿತಿಗೆ ಮರಳುವಂತೆ ಮಾಡುತ್ತದೆ. ಹಿಂದೆಲ್ಲ ಬೆನ್ನುಮೂಳೆ ಸರ್ಜರಿ ಮಾಡಿಸಿಕೊಂಡ ವ್ಯಕ್ತಿ ವಾರಾನುಗಟ್ಟಲೆ ಆಸ್ಪತ್ರೆಯಲ್ಲಿ ಉಳಿಯಬೇಕಿತ್ತು. ಆದರೆ ಈ ತಂತ್ರಜ್ಞಾನದ ಮೂಲಕ ಸರ್ಜರಿ ಮಾಡಿಸಿಕೊಂಡ ರೋಗಿ ಕೇವಲ 48 ಗಂಟೆಗಳಲ್ಲಿ ಮನೆಗೆ ಮರಳಬಹುದು. ಎಸ್‌ಎಸ್‌ಎನ್‌ಎಂಸಿ ಆಸ್ಪತ್ರೆಯಲ್ಲಿ ಇದುವರೆಗೆ ಸುಮಾರು 25 ರೋಗಿಗಳು ಈ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದು ಬೇಗನೆ ಗುಣಮುಖರಾಗಿ ತಮ್ಮ ಕರ್ತವ್ಯಕ್ಕೆ ಮರಳಿದ್ದಾರೆ' ಎಂದು ವಿವರ ನೀಡುತ್ತಾರೆ ಡಾ. ವೆಂಕಟರಮಣ. ■

## ಶಸ್ತ್ರಚಿಕಿತ್ಸೆಯೊಂದೇ ದಾರಿ



ಸಾಮಾನ್ಯವಾಗಿ ಬೆನ್ನುನೋವಿಗೆ ಫಿಸಿಯೋಥೆರಪಿ, ಯೋಗ, ವ್ಯಾಯಾಮ, ಜೀವನಶೈಲಿ ಬದಲಾವಣೆ ಸೂಕ್ತ ಪರಿಹಾರ ಒದಗಿಸಬಹುದಾದರೂ ಅಪಘಾತ, ಬೊಜ್ಜು, ವಯಸ್ಸಿನ ಕಾರಣದಿಂದ ಬರುವ ತೀವ್ರ ಬೆನ್ನುನೋವು ಮುಂತಾದ ಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆ ಒಂದೇ ದಾರಿ ಆಗಬೇಕಾಗುತ್ತದೆ. ಇಂತಹ ಸಮಯದಲ್ಲಿ 3ಡಿ ತಂತ್ರಜ್ಞಾನ ಬಹಳ ಉಪಯೋಗಕ್ಕೆ ಬರುತ್ತದೆ.

3ಡಿ ತಂತ್ರಜ್ಞಾನದಿಂದ ಶಸ್ತ್ರಚಿಕಿತ್ಸೆ ನಡೆಸಬೇಕಾದ ಭಾಗವನ್ನು ನಿಖರವಾಗಿ ಗುರುತಿಸಬಹುದು. ಸಣ್ಣ ಭಾಗವನ್ನು ಮಾತ್ರ ಕತ್ತರಿಸಿ ಸರ್ಜರಿ ಮಾಡಬಹುದು. ಇದರಿಂದ ರೋಗಿಗೆ ನೋವಿನ ಪ್ರಮಾಣ ಅತ್ಯಲ್ಪ. ಸರ್ಜರಿಯನ್ನು ಕೇವಲ ಒಂದು ಗಂಟೆಯೊಳಗೆ ಮುಗಿಸಬಹುದು. ರೋಗಿ ಮಾನಸಿಕವಾಗಿ ಕುಗ್ಗುವ ಅಗತ್ಯವಿಲ್ಲ. ಬೆನ್ನುಮೂಳೆಯ ಮಧ್ಯೆ ಗಡ್ಡೆಗಳಿದ್ದರೆ ಅದನ್ನು ಮಾತ್ರ ತೆಗೆಯಬಹುದು. ಇದರಿಂದ ಅನವಶ್ಯಕವಾಗಿ ಬೇರೆ ಭಾಗಗಳಿಗೆ ಗಾಯವಾಗುವುದು ತಪ್ಪುತ್ತದೆ. ಇವೆಲ್ಲವೂ ಈ ಸರ್ಜರಿಯ ಪ್ಲಸ್ ಪಾಯಿಂಟ್.

## ನನ್ನ ಕನ್ನಡ

ಕಿರಣ್ ಕಾವೇರಪ್ಪ

ಚಿತ್ರ ಸಾಹಿತಿ



### ಕನ್ನಡದ ಆಲಿಂಗನ-ಕಂಪನ

ಕನ್ನಡದ ಮೂಲಕ ನಿತ್ಯದ ಬದುಕನ್ನು ನೋಡೋದೇ ಕನ್ನಡತನ. ಜಗತ್ತಿನ ಅಷ್ಟೂ ಸಂಗತಿಗಳನ್ನು ಯಾವುದೇ ಭಾಷೆಯಲ್ಲಿ ಓದಿದರೂ ನೋಡಿದರೂ ಗ್ರಹಿಕೆ ಮಾತ್ರ ಕನ್ನಡದ್ದೇ ಆಗಿರುತ್ತದೆ. ಅದೇ ಕನ್ನಡತನ. ನನಗೆ ಕೊಡವ ಮತ್ತು ಕನ್ನಡವೆರಡೂ ಮಾತೃಭಾಷೆಯೆಂದೇ ಅನಿಸುತ್ತದೆ. ಕೊಡವಕ್ಕೆ ಲಿಪಿಯಿಲ್ಲ. ಕನ್ನಡವನ್ನೇ ಲಿಪಿಯಾಗಿ ಬಳಸುತ್ತಿದ್ದೀವಿ. ಆಂಗ್ಲಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದರೂ ಕನ್ನಡ ಸಿನಿಮಾಗಳಿಗೆ ಗೀತೆ ಬರೆದು ಹೆಸರು ಮಾಡಲು ಸಾಧ್ಯವಾಯಿತು. ಪಿಯುಸಿಯಿಂದಲೇ ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿಯೂ ಬರೆಯಲು ಆರಂಭಿಸಿದೆ. ಆದರೆ, ಕೈಹಿಡಿದಿದ್ದು ಮಾತ್ರ ಕನ್ನಡ. ಯಾಕೆಂದರೆ ಅದು ಎದೆಯಾಳದ ಭಾಷೆ. ಭಾವನೆಗಳನ್ನು ಸರಾಗವಾಗಿ ವ್ಯಕ್ತಪಡಿಸಲು ಈ ಭಾಷೆಗೆ ಮಾತ್ರ ಸಾಧ್ಯ ಎನ್ನಿಸುವಷ್ಟು ಆಪ್ತವಾದ ಭಾಷೆ.

ವಿಧೇಯತೆಯಿಂದ ಇರೋದನ್ನು ಕಲಿಸಿದೆ. ಭಾಷೆಯ ಧಾಟಿಯಲ್ಲಿಯೇ ವಿಧೇಯತೆಯಿದೆ. ಬೇರೆ ರಾಜ್ಯದಲ್ಲಿ ಹೋಗಿ ಮಾತನಾಡುವಾಗ, ಪ್ರಶಸ್ತಿ ಪಡೆಯುವಾಗ, ದೊಡ್ಡ ವೇದಿಕೆಗಳಲ್ಲಿ ಮಾತನಾಡುವಾಗ ಭಾಷೆಯಲ್ಲಿಯೇ ಒಂದು ಕಂಪನವಿದೆ. ಅದು ವ್ಯಕ್ತಿತ್ವಕ್ಕೆ ದೊಡ್ಡ ಕೊಡುಗೆ ನೀಡಿದೆ.